ದಿನಾಂಕಃ 19.11.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಕ್ಲೇಮುದಾರರು ಹಾಜರಿರುತ್ತಾರೆ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ ಸದರಿ ಪ್ರಮಾಣ ಪತ್ರದಲ್ಲಿ ತಿಳಿಸಿದ ಎಲ್ಲಾ ಅಂಶಗಳನ್ನು ನನ್ನ ಹೇಳಿಕೆಯ ಮೇಲೆ ದಾಖಲಿಸಿದ್ದು, ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯದಿಂದ ಕೂಡಿರುತ್ತವೆಂದು ಪ್ರಮಾಣೀಕರಿಸಿರುತ್ತೇನೆ. ಪಿ ಡಬ್ಲ್ಯೂ-1 ಎಂದು ವಿಚಾರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ** ಕ್ಲೇಮುದಾರರ ಪರವಾಗಿ ಶ್ರೀ. ಆಯ್ ಎಸ್ ವಾಯ್ ವಕೀಲರಿಂದ

ಹೆಚ್ಚಿನ ಪರಿಹಾರ ಕೋರಿ 1 ನೇ ಎದುರುದಾರರಲ್ಲಿ ಸಲ್ಲಿಸಿದ ಪರಾಮರ್ಶೆ/ತಕರಾರು ಅರ್ಜಿಯನ್ನು, 3 ಕ್ರಯಪತ್ರಗಳ ಆನ್ ಲೈನ್ ನಕಲುಗಳನ್ನು, ಎಲ್ ಎ ಸಿ ನಂ.56/2012 ರ ತೀರ್ಪು ಹಾಗೂ ಐತೀರ್ಪಿನ ನಕಲುಗಳನ್ನು, ಮೇಲ್ಮನವಿ ಸಲ್ಲಿಸದೇ ಇರುವ ಬಗ್ಗೆ ನೀಡಿದ ಅಬಿಪ್ರಾಯ ವರದಿಯನ್ನು ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ.61 ರಡಿ ಸಲ್ಲಿಸಿದ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ.ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-8 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** 1 ನೇ ಎದುರುದಾರರ ಪರವಾಗಿ ವಿಶೇಷ ಸರಕಾರಿ ವಕೀಲರಿಂದಃ

2. ನಾನು ಹಾಜರುಪಡಿಸಿದ ಕ್ರಯ ಪತ್ರಗಳು ಮತ್ತು ನ್ಯಾಯಾಲಯದ ತೀರ್ಪುಗಳು ನಮ್ಮ ಆಸ್ತಿಗೆ ಅನ್ವಯಿಸುವುದಿಲ್ಲವೆಂದರೆ ಸರಿಯಲ್ಲ. ನಮ್ಮ ಪ್ಲಾಟನಿಂದ ಹಾಜರುಪಡಿಸಿದ ಕ್ರಯಪತ್ರಗಳ ಮತ್ತು ತೀರ್ಪುಗಳ ಪ್ಲಾಟಗಳು ಅರ್ಧ ಕಿಲೋಮೀಟರ ದೂರದಲ್ಲಿರುತ್ತವೆಂದರೆ ಸರಿ. ನಮ್ಮ ಆಸ್ತಿಯನ್ನು ಸ್ವಾದೀನಪಡಿಸಿಕೊಳ್ಳುವ ಪೂರ್ವದಲ್ಲಿ ಸರಕಾರದವರು ನೋಟೀಸು ನೀಡಿರುತ್ತಾರೆಂದರೆ ಸರಿ. ಸರಕಾರದ ಅಧಿಕಾರಿಗಳು ಅಂದರೆ ಬಿಟಿಡಿಎ ರವರು ನಮ್ಮ ಮನೆಗೆ ಬಂದು ಮನೆ ಅಳತೆ ಮಾಡಿಕೊಂಡು ಹೋಗಿರುತ್ತಾರೆಂದರೆ ಸರಿ. ಆ ಸಮಯದಲ್ಲಿ 2013-14 ರಲ್ಲಿದ್ದ ಮಾರುಕಟ್ಟೆ

ಬೆಲೆಗೆ ಪೂರಕವಾಗಿ ನಮ್ಮ ಆಸ್ತಿಗೆ ಬೆಲೆಯನ್ನು ನಿಗದಿ ಮಾಡಿ ಪರಿಹಾರ ನೀಡಿರುತ್ತಾರೆಂದರೆ ಸರಿಯಲ್ಲ.

**ಪಾಟೀ ಸವಾಲುಃ 2** ನೇ ಎದುರುದಾರರ ಪರವಾಗಿ ಮಾನ್ಯ ಡಿಜಿಪಿ ವಕೀಲರು ಮತ್ತು 3 ನೇ ಎದುರುದಾರರ ಪರವಾಗಿ ಶ್ರೀ ಆರ್ ಟಿ ಎಚ್ ವಕೀಲರು ಮೇಲ್ಕಂಡ ಒಂದನೇ ಎದುರುದಾರರ ಪಾಟೀ ಸವಾಲನ್ನೇ ಅಂಗೀಕರಿಸಲು ಕೋರಿರುತ್ತಾರೆ.

ಮರು ವಿಚಾರಣೆ ಇರುವುದಿಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ .